**SC No. 23/2024**
**PW-8**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 23/2024

| | | |
|---|---|---|
| ಸಾಕ್ಷಿದಾರರ ಹೆಸರು | ವಿಕ್ರಮ್ | ಪ್ರಮಾಣ ವಚನ ಮಾಡಿದ ದಿನಾಂಕ: 19.01.2026 |
| ತಂದೆಯ/ಗಂಡನ ಹೆಸರು | ಹನುಮಂತರೆಡ್ಡಿ | |
| ವಯಸ್ಸು | 37 ವರ್ಷ | |
| ವೃತ್ತಿ | ಫ್ಯಾಕ್ಟರಿ ಕೆಲಸ | ಪ್ರಾ.ಸಾಃ 8 |
| ವಾಸ ಸ್ಥಳ | ಗಂಗಾ ನಗರ ಮೈಸೂರು | ಚಾ.ಸಾಃ 8 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಗಳನ್ನು ನಿಪಿ. 2 (ಬಿ) ಮತ್ತು 2(ಸಿ) ಎಂದು ಗುರುತಿಸಲಾಯಿತು. ಈಗ್ಗೆ ಎರಡೂವರೆ ವರ್ಷಗಳ ಹಿಂದೆ ನಿಪಿ-2 ಕ್ಕೆ ಸಹಿ ಮಾಡಿದ್ದೆ. ನಾನು ಚಾಸಾ-1 ರವರ ಮನೆಯ ಹತ್ತಿರ ಹೋಗಿದ್ದಾಗ ಅಲ್ಲಿಗೆ ಪೊಲೀಸರು ಬಂದಿದ್ದರು. ಚಾಸಾ-1 ರವರ ತಾಯಿಗೆ ಹೊಡೆದು ಬಂಗಾರದ ಒಡವೆಯನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಾಗಿತ್ತು ಆ ಕಾರಣಕ್ಕಾಗಿ ನಾನು ಹೋಗಿದ್ದೆ. ಪೊಲೀಸರು ಏನು ಮಾಡಿದರು ಎಂದು

ನನಗೆ ಗೊತ್ತಿಲ್ಲ. ಪೊಲೀಸರು ಘಟನೆ ನಡೆದಿರುತ್ತದೆ ಈ ಸಂಬಂಧವಾಗಿ ಸಾಕ್ಷಿ ಎಂದು ಸಹಿ ಮಾಡುವಂತೆ ಹೇಳಿದ್ದರು ಅದಕ್ಕೆ ನಾನು ಸಹಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಏನನ್ನು ತೆಗೆದುಕೊಂಡಿರುವುದಿಲ್ಲ. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರಿಗೆ ನೋಟೀಸ್ ಅನ್ನು ತೋರಿಸಲಾಯಿತು. ಸಾಕ್ಷಿದಾರರು ನೊಟೀಸ್ ಅನ್ನು ನೋಡಿ ಗುರುತಿಸಿದ್ದು ನೊಟೀಸ್ ಅನ್ನು ನಿಪಿ–21 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–21(ಎ) ಎಂದು ಗುರುತಿಸಲಾಯಿತು. ನಿಪಿ–21 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 30.03.2023 ರಂದು ನಾನು ಚಾಸಾ–1 ರವರ ಮನೆಯ ಹತ್ತಿರ ಹೋಗಿದ್ದೆ ಎಂದರೆ ನನಗೆ ದಿನಾಂಕ ಗೊತ್ತಿರುವುದಿಲ್ಲ. ಪೊಲೀಸರು ನನಗೆ ನಿಪಿ–21 ರಂತೆ ನೊಟೀಸ್ ಅನ್ನು ಜಾರಿ ಮಾಡಿದ್ದರು ಎಂದರೆ ಸರಿ. ಮೊಲೀಸರು ರೂಂನ ಒಳಗಡೆ ಹೋಗಿ ಬೆಡ್ ರೂಂನ ಬಾಗಿಲ ಹತ್ತಿರ ರಕ್ತದ ಕಲೆಗಳು ಬಿದ್ದಿದ್ದು ಅದನ್ನು ಹತ್ತಿಯಲ್ಲಿ ಪೊಲೀಸರು ಸಂಗ್ರಹಿಸಿದ್ದರು ಎಂದರೆ ಸರಿ. ಮತ್ತು ಅದೇ ಕಾಲಕ್ಕೆ ಮಾದರಿ ಕಾಟನ್ ಅನ್ನು ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ್ಥಳ ದಲ್ಲಿ ಚಾಸಾ–1 ರವರ ತಾಯಿಗೆ ನಾನು

ಈಗ ನೋಡುತ್ತಿರುವ ಎಂ.ಒ–1 ಚೊಂಬಿನಿಂದಲೇ ಹಲ್ಲೆ ಮಾಡಿದ್ದರು ಅದನ್ನು ಪೊಲೀಸರು ನನ್ನ ಸಮಕ್ಷಮ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಎಂ.ಒ–1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ರಕ್ತವನ್ನು ಸಂಗ್ರಹಿಸಿದ ಕಾಟನ್ ಮತ್ತು ಮಾದರಿ ಕಾಟನ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂ.ಒ–2 ಎಂದು ಗುರುತಿಸಲ್ಪಟ್ಟಿರುತ್ತವೆ. ಎಂ.ಒ–2 ರ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಎಂ.ಒ–1 ಅನ್ನು ನನ್ನ ಸಮಕ್ಷಮವೇ ಅಮಾನತ್ತು ಪಡಿಸಿಕೊಂಡು ಅಲ್ಲಿಯೇ ನನ್ನ ಸಹಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಆದರೆ ಸಹಿ ತೆಗೆದುಕೊಂಡಿದ್ದರು. ಎಂ.ಒ–1 ಅನ್ನು ನನ್ನ ಸಮಕ್ಷಮವೇ ತೆಗೆದುಕೊಂಡಿದ್ದರು ಸಹ ತೆಗೆದುಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

ನನಗೆ ಫ್ರಾಸಾ–1 ವಯಕ್ತಿಕವಾಗಿ ಪರಿಚಯ ಇರುವುದಿಲ್ಲ. ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.**